ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅದಕ್ಕೂ ಕೂಡ ಖರ್ಚು ಮಾಡಿದ್ದೇವೆ, ಆದರೆ ಅದು ಬ್ರೇಕ್ ಅಪ್ ಆಗಿದ. ಒಟ್ಟಿನಲ್ಲಿ ಅದಕ್ಕೂ ಹೆಚ್ಚು ಹಣ ಖರ್ಚು ಮಾಡಿದ್ದೇವೆ.

ಶ್ರೀ ಎಂ. ರಾಮಪ್ಪ.—ಈ ರಸ್ತೆಗಳಿಗೆ ಎಷ್ಟು ದುಡ್ಡು ಕೊಟ್ಟಿದ್ದೀರಿ ಅನ್ನುವುದನ್ನು ಹೇಳಲಿಲ್ಲವಲ್ಲಾ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಆ ಜೋನ್‌ನಲ್ಲಿರುವ ರಸ್ತೆ ಕೆಲಸಕ್ಕಾಗಿ ಈ ವರ್ಷ ೨೫ ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಮುಂದಿನ ವರ್ಷ ಅದಕ್ಕೆ ಇನ್ನೂ ಹೆಚ್ಚಿಗೆ ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಎಂ. ರಾಮಪ್ಪ.—ಒಂದೊಂದು ಪ್ರಾಜೆಕ್ಟ್‌ಗೂ ಎಷ್ಟೆಷ್ಟು ಎಂದು ಏನಾದರೂ ಲೆಕ್ಕ ಇದೆಯೇ

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಬೇರೆ ಬೇರೆ ಪ್ರಾಜೆಕ್ಟ್ ಎಂತಲೇ ಒಟ್ಟು ಇಷ್ಟು ದುಡ್ಡನ್ನು ಕೊಟ್ಟಿದ್ದೇವೆ.

ಶ್ರೀ ಎಂ. ರಾಮಪ್ಪ.—ಈಗ ಕೊಟ್ಟಿರುವ ೨೫ ಲಕ್ಷ ರೂಪಾಯಿ ಸಾಕಾಗುತ್ತದೆಯೇ

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈಗ ಅಷ್ಟು ದುಡ್ಡನ್ನು ಕೊಟ್ಟಿದ್ದೇವೆ. ಮುಂದೆ ಇನ್ನೂ ಹೆಚ್ಚು ಕೊಡಬೇಕಾದ ಸಂದರ್ಭ ಬಂದಾಗ ಕೊಡುತ್ತೇವೆ.

ಶ್ರೀ ಎಚ್. ಗಂಗಾಧರನ್.—ಈ ಪ್ರಾಜೆಕ್ಟ್‌ಗಳಿಗೆ ಸಾವಿರಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಹೇಳಿದ್ದೀರಲ್ಲಾ ಇದಕ್ಕೆ ಕೇಂದ್ರ ಸರ್ಕಾರದಿಂದ ಎಷ್ಟು ಸಿಗಬಹುದು, ನೀವು ಇದರಲ್ಲಿ ಎಷ್ಟು ಇನ್‌ವೆಸ್ಟ್‌ಮೆಂಟ್ ಮಾಡಬೇಕೆಂದಿದ್ದೀರಿ, ಇದರ ಬಗ್ಗೆ ನಿಮ್ಮ ಅಂದಾಜು ಎಷ್ಟು

ಎರಡನೆಯದಾಗಿ, ಈಗ ನೀವು ವೈನರ್ ಇರಿಗೇಷನ್ ವರ್ಕ್ಸ್ ತೆಗೆದು ಕೊಂಡಿದ್ದೀರಲ್ಲಾ ಅದರಲ್ಲಿ ಕೆಲವು ಕಡೆ ನೀರು ಇಲ್ಲದೆ ಎನು ಫೈಲ್ಯೂರ್ ಆಗಿವೆ, ಇದರ ಬಗ್ಗೆ ತಾವು ಇನ್‌ವೆಸ್ಟ್ ಮಾಡಿರುವುದು ಎಷ್ಟು ? ಇದಕ್ಕೆ ಕಾರಣರು ಯಾರು ? ಈ ಬಗ್ಗೆ ತನಿಖೆ ನಡೆಸುವುದಕ್ಕೆ ಏನಾದರೂ ಮಾಡಿದ್ದೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈ ವೈನರ್ ಇರಿಗೇಷನ್ ಎಷ್ಟೆಷ್ಟು ಹಣ ಒದಗಿಸಿದ್ದೇವೆ ಅನ್ನುವುದನ್ನು ಹೇಳಬೇಕಾದರೆ ಅದರಲ್ಲಿ ಕೆಲವು ಯೋಜನೆಗಳು ಇನ್ನು ಪೂರ್ತಿಯಾಗಿಲ್ಲಾ. ಆ ಯೋಜನೆಗಳೆಲ್ಲಾ ಪೂರ್ತಿಯಾದ ಮೇಲೆ ಅದರಲ್ಲಿ ಎಷ್ಟು ಟ್ಯಾಂಕ್ಸ್‌ಗಳು ಉಪಯುಂಕ್ತವಾಗಿವೆ, ಎಷ್ಟು ಟ್ಯಾಂಕ್‌ಗಳು ನಿರುಪಯುಕ್ತವಾಗಿವೆ ಎನ್ನುವುದನ್ನು ಹೇಳಬಹುದು. ಈಗಲೇ ಅದರ ವರದಿ ಬೇಕು ಎನ್ನುವುದಾದರೆ ಸಮಗ್ರವಾದ ವರದಿಯನ್ನು ತರಿಸಿ ಅದರ ಅಂಕಿ ಅಂಶಗಳನ್ನು ತಿಳಿಸುತ್ತೇನೆ.

Ingla Tank Near Bylakuppa Village, Periapatna Taluk

756 SRI K. S. KALAMARI GOWDA (Periyapatna) — Will the Minister for Transport and Minor Irrigation be pleased to state.—

(a) the amount spent by the Government for Ingla tank near Bylakuppe village of Periyapatna taluk ;

(b) the reasons for stoppage of work though funds are available, whether it is a fact that the Forest Department is coming in the way;

(c) if so, when the work will be completed and water will be supplied to farmers by avoiding obstacles ?

SRI M.M.J. SADYOJATHA (Minister for Transport and Minor Irrigation).—

(a) Expenditure incurred up to the end of January 1982 Rs. 16,69,654.

(b) Forest Department has not given its consent.

(c) Soon after obtaining concurrence of Forest Department work will be resumed as early as possible and water will be supplied to farmers.

ಶ್ರೀ ಕೆ.ಎಸ್. ಕಾಳಮರಿಗೌಡ.—ಸ್ವಾಮಿ, ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ಜನವರಿ ೧೯೮೨ರ ಅಂತ್ಯದವರೆಗೆ ಆಗಿರುವ ವೆಚ್ಚ ರೂ. ೧೬,೬೯,೬೫೪ ಎಂದು ತಿಳಿಸಿದ್ದೀರಿ. ಈ ಕೆಲಸವನ್ನು ಯಾವಾಗ ಶುರು ಮಾಡಿದಿರಿ, ಈ ಕೆಲಸ ಪೂರ್ತಿಯಾಗದೇ ಇರುವುದಕ್ಕೆ ಕಾರಣ ಏನಂ ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಈ ಕೆಲಸ ಪ್ರಾರಂಭ ಮಾಡಿದ್ದು ೧೯೭೪–೭೫ರಲ್ಲಿ ಜನವರಿ ೧೯೮೨ರ ಅಂತ್ಯದವರೆಗೆ ಇದಕ್ಕೆ ೧೬,೬೯,೬೫೪ ರೂಪಾಯಿ ಖರ್ಚಾಗಿದೆ. ಈ ಕೆಲಸ ಮುಂಗಿಯುವ ಹಂತದಲ್ಲಿದೆ. ಆದರೆ ಅರಣ್ಯ ಇಲಾಖೆಯವರು ಇದರ ಬಗ್ಗೆ ಅಡ್ಡಿ ಮಾಡಿದ್ದರಿಂದ ಈ ಕೆಲಸ ಸ್ಥಗಿತವಾಗಿದೆ. ಆದಷ್ಟು ತೀವ್ರದಲ್ಲೇ ಅರಣ್ಯ ಇಲಾಖೆಯಿಂದ ಇದನ್ನು ರಿಲೀಸ್ ಮಾಡಿಸಿಕೊಂಡು ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಕೆ.ಎನ್. ಕಾಳಮರಿಗೌಡ.—ಈ ಅರಣ್ಯ ಇಲಾಖೆಯವರು ತಕರಾರು ಮಾಡುತ್ತಿದ್ದಾರೆ ಅಂತ ಈಗ ತಾವು ಹೇಳುತ್ತಿದ್ದೀರಾ. ೧೯೭೫ರಲ್ಲೇ ನೀವು ಇದರ ಪ್ರಾರಂಭ ಮಾಡಿದಾಗ ನಿಮ್ಮ ಗಮನಕ್ಕೆ ಬರಲಿಲ್ಲವೇ ? ಅರಣ್ಯ ಇಲಾಖೆಯವರಾಗಲಿ ಅಥವಾ ಮೈನರ್ ಇರಿಗೇಷನ್ ಇಲಾಖೆಯವರಾಗಲಿ, ಈ ಜಾಗ ಅರಣ್ಯ ಇಲಾಖೆಗೆ ಸೇರಿದೆ ಅಲ್ಲಿ ಕಟ್ಟೆ ಕಟ್ಟಬಾರದು ಅನ್ನುವುದಾಗಲಿ ಅಥವಾ ಅರಣ್ಯ ಇಲಾಖೆಯವರು ಒಂದು ಮೇಳೆ ಒಪ್ಪಿಗೆ ಕೊಟ್ಟಿದ್ದರೆ ಅದಕ್ಕೆ ಅವರಿಂದ ಪರ್ಮಿಷನ್ ತೆಗೆದುಕೊಳ್ಳಲಿಲ್ಲ ಅನ್ನುವುದಾಗಲಿ ನಿಮ್ಮ ಗಮನಕ್ಕೆ ಈ ವಿಚಾರವನ್ನು ತರಲಿಲ್ಲವೇ? ಇವೊತ್ತು ಕೇಳಿದರೆ ಅರಣ್ಯ ಇಲಾಖೆಯವರು ಇದಕ್ಕೆ ಒಪ್ಪಿಗೆ ಕೊಡಲಿಲ್ಲಾ ಅಂತ ಹೇಳುತ್ತಿದ್ದೀರಲ್ಲಾ ಇದುವರೆಗೆ ನಿಮ್ಮ ಇಲಾಖೆಯವರು ಕಣ್ಣುಮುಚ್ಚಿಕೊಂಡು ಕುಳಿತ್ತಿದ್ದರೇ ? ಇದಕ್ಕೆ ಅವರಿಂದ ತಕರಾರು ಬರುತ್ತದೆ ಅನ್ನುವುದು ನಿಮಗೆ ಗೊತ್ತಿರಲಿಲ್ಲವೇ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಇದರ ಬಗ್ಗೆ ಸೆಂಟ್ರಲ್ ಗೌರ್ನಮೆಂಟ್‌ನವರ ಪರ್ಮಿಷನ್ ಸಹ ಬೇಕಾಗಿತ್ತು. ಅವರೂ ಕೂಡ ತಕರಾರು ಮಾಡುತ್ತಿದ್ದರು. ಆದಷ್ಟು ಬೇಗ ಇದಕ್ಕೆ ಪರ್ಮಿಷನ್ ತರಿಸಿಕೊಂಡು ಈ ಇಂಗ್ಲಿ ಕೆರೆಯ ಕಟ್ಟೆಯ ಕೆಲಸವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಎಸ್. ಕಾಳಮರಿಗೌಡ.—ಯಾವೊತ್ತು ತಾವು ಫಾರೆಸ್ಟ್ ಇಲಾಖೆಯ ಪರ್ಮಿಷನ್ ತರಿಸಿಕೊಳ್ಳುತ್ತೀರಾ ? ಈ ಇಂಗ್ಲ ಕೆರೆಯ ಕೆಲಸ ಈಗಾಗಲೇ ಮುಕ್ಕಾಲು ಭಾಗ ಆಗಿದೆ. ಇನ್ನು ೩–೪ ಲಕ್ಷ ರೂಪಾಯಿ ಖರ್ಚು ಮಾಡಿದರೆ ೧೨೦೦ ಎಕರೆಯಷ್ಟು ಜಮೀನು ನೀರಾವರಿಗೆ ಬರುತ್ತದೆ. ಅರಣ್ಯ ಇಲಾಖೆಯವರು ಇದರ ಬಗ್ಗೆ ತಕರಾರು ಹಾಕಿದ್ದರೆ ಅದರ ಬಗ್ಗೆ ತಾವು ಸ್ವಲ್ಪ ಪ್ರಯತ್ನಪಟ್ಟು ಆದಷ್ಟು ಬೇಗ ಈ ಇಂಗ್ಲ ಕೆರೆಯ ಕೆಲಸವನ್ನು ಮುಂಗಿಸಿ ನಮ್ಮ ತಾಲ್ಲೂಕಿನ ಜನರಿಗೆ ಈ ನೀರಿನ ಸೌಲಭ್ಯ ಒದಗಿಸಿಕೊಡುತ್ತೀರಾ ? ಹಾಗೇನೇ ಇನ್ನೊಂದು ಅಳಲೂರು ಟ್ಯಾಂಕ್ ಅಂತ ಇದೆ. ಆ ಟ್ಯಾಂಕ್ ಕೆಲಸವನ್ನೂ ಮುಗಿಸಿದರೆ ಅದರಿಂದ ೨ ಸಾವಿರ ಎಕರೆ ನೀರಾವರಿಯಾಗುತ್ತದೆ. ಅದಕ್ಕೂ ಕೂಡ ಅರಣ್ಯ ಇಲಾಖೆಯವರು ಪರ್ಮಿಷನ್ ಕೊಡದೆ ಅಲ್ಲಿ ಕೆಲಸವೂ ಆಗುತ್ತಾ ಇಲ್ಲ. ಇದಕ್ಕೆ ತಾವೇನು ಕ್ರಮ ತೆಗೆದುಕೊಂಡಿದ್ದೀರಾ ? ಈ ಇಂಗ್ಲ ಕೆರೆಗೆ ಸುಮಾರು ೧೬ ಲಕ್ಷ ರೂಪಾಯಿ ಈಗಾಗಲೇ ಖರ್ಚು ಮಾಡಿದ್ದೀರಿ, ಇನ್ನು ಸ್ವಲ್ಪ ಖರ್ಚು ಮಾಡಿದರೆ ಸಾಕು, ಈ ಕೆಲಸವನ್ನು ಇನ್ನು ಒಂದು ತಿಂಗಳಲ್ಲಾದರೂ ಮುಗಿಸಿ ಆ ತಾಲೂಕಿನ ಜನರಿಗೆ ಸಹಾಯ ಮಾಡಿಕೊಡುತ್ತೀರಾ ? ಅದೇ ರೀತಿ ಅಳಲೂರು ಟ್ಯಾಂಕ್‌ಗೂ ಸಹ ಅರಣ್ಯ ಇಲಾಖೆಯವರು ಅವಕಾಶ ಕೊಟ್ಟಿಲ್ಲಾ, ನಾನು ಕೇಳುವುದು ಇಷ್ಟೇ ? ಇನ್ನು ಎಷ್ಟು ದಿವಸದಲ್ಲಿ ಈ ಅರಣ್ಯ ಇಲಾಖೆಯವರಿಂದ ಪರ್ಮಿಷನ್ ತೆಗೆದುಕೊಂಡು, ಅವರಿಂದ ಕ್ಲಿಯರೆನ್ಸ್ ತೆಗೆದುಕೊಂಡು ಆ ತಾಲೂಕಿನ ಜನರಿಗೆ ನೀರನ್ನು ಒದಗಿಸಿಕೊಡುತ್ತೀರಾ ? ಈ ಬಗ್ಗೆ ತಮ್ಮ ಸ್ಪಷ್ಟ ಭರವಸೆ ನನಗೆ ಬೇಕು.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಆದಷ್ಟು ಶೀಘ್ರವಾಗಿ ಅರಣ್ಯ ಇಲಾಖೆಯವರಿಂದ ಪರ್ಮಿಷನ್ ತೆಗೆದುಕೊಂಡು ಸಧ್ಯದಲ್ಲೇ ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಸ್. ಕಾಳಮಂರಿಗೌಡ.—ನಾನು ಇದರ ಬಗ್ಗೆ ಪ್ರಶ್ನೆ ಹಾಕುತ್ತಾ ಇರುವುದು ಳನೇ ಸಾರಿ. ಪ್ರತಿ ಸಲವೂ ಪ್ರಶ್ನೆ ಹಾಕಿದಾಗ ಅತಿ ಶೀಘ್ರವಾಗಿ, ಅತಿ ಶೀಘ್ರವಾಗಿ, ಎಂದು ಹೇಳಿ ಒಂದು ವರ್ಷವಾ ಗುತ್ತಾ ಬಂತು ಅರಣ್ಯ ಇಲಾಖೆಯ ಮಂತ್ರಿಗಳ ಕಡೆಯೂ ಈ ಪ್ರಶ್ನೆ ಹಾಕಿದಾಗ ಅವರಿಂದಲೂ ಸಹ ಇದನ್ನು ಅತಿ ಶೀಘ್ರವಾಗಿ ತೆಗೆದುಕೊಂಡು ಇದನ್ನು ಪರಿಹಾರ ಮಾಡುತ್ತೇವೆ ಅನ್ನುವ ಉತ್ತರ ಬಂತು. ಇದುವರೆಗೂ ಯಾರಿಂದಲೂ ಏನೂ ಆಗಲಿಲ್ಲಾ, ಆದುದರಿಂದ ಈಗಲಾದರೂ ಕೂಡ ನನಗೆ ಒಂದು ಸ್ಪಷ್ಟ ಭರವಸೆ ಬೇಕು.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಆದಷ್ಟು ಬೇಗ ಅಂತ ಮಾತ್ರ ನಾನು ಹೇಳಬಲ್ಲೆ.

ಶ್ರೀ ಕೆ.ಎಸ್. ಕಾಳಮರಿಗೌಡ.— ಯಾವಾಗಲೂ ಕೇಳಿದರೆ ಆದಷ್ಟು ಬೇಗ ಎಂದು ಹೇಳುತ್ತೀರೇ ವಿನಾ, ಳನೇ ಸಲ ಕೇಳಿದರೂ ಕೂಡ ಆದಷ್ಟು ಬೇಗ, ಅತಿ ಶೀಘ್ರ ಅಂತ ಹೇಳುತ್ತಾರೆ ವಿನಾ ಇನ್ನೇನೂ ಹೇಳುವುದಿಲ್ಲ. ಮಾನ್ಯ ಮಂತ್ರಿಗಳಿಂದ ಸ್ಪಷ್ಟ ಭರವಸೆ ಬರುವ ಹಾಗೆ ಮಾನ್ಯ ಅಧ್ಯಕ್ಷರಾದರೂ ಒತ್ತಾಯ ಮಾಡುತ್ತೀರಾ ?

MR. DEPUTY SPEAKER.—You cannot compel the Hon. Minister to give possitive reply.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಇನ್ನು ವರ್ಷಗಟ್ಟಲೆ ಆ ಕೆಲಸ ಮುಂದಕ್ಕೆ ಹೋಗುವುದಿಲ್ಲ. ಇನ್ನು ೨-೩ ತಿಂಗಳಲ್ಲಿ ಆಗುವ ಹಾಗೆ ಮಾಡುತ್ತೇನೆ.

Construction of Upper Bhadra Project

804. SRI T. B. JAYACHANDRA (Kallambella) —Will the Minister of State for Major and Medium Irrigation be pleased to state.—

(a) whether it is afact that there is a delay in sanctioning the Upper Bhadra Project though it is included under VI Plan;

(b) if so, when the work will be taken up ?

SRI B. B. CHIMMANAKATTI (Minister of State for Major and Medium Irrigation).—

(a) The project is still under investigation.

(b) The work will be taken up after project report is prepared and cleared by Central Water Commission and also based on the financial resources.

ಶ್ರೀ ಕಡಿದಾಳ್ ದಿವಾಕರ್.—(ಶ್ರೀ ಟಿ. ಬಿ. ಜಯಚಂದ್ರ ಅವರ ಪರವಾಗಿ) ಸ್ವಾಮಿ, ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ಈ ಯೋಜನೆಯು ಇನ್ನೂ ತನಿಖೆಯಲ್ಲಿದೆ ಅಂತ ಹೇಳಿದ್ದೀರಿ. ಇದು ೬ ನೇ ಪಂಚವಾರ್ಷಿಕ ಯೋಜನೆಯಲ್ಲಾದರೂ ಸೇರಿದೆಯೇ ಅನ್ನುವುದನ್ನು ತಿಳಿಸುತ್ತೀರಾ ? ಮತ್ತು ಇದಕ್ಕೆ ಎಷ್ಟು ಇನ್‌ವೆಸ್ಟ್ ಮಾಡಿದ್ದೀರಾ ? ಮತ್ತು ಎಷ್ಟು ಜನ ಇಂಜಿನೀಯರ್ಸ್ ಮತ್ತು ಎಷ್ಟು ಜನ ಸ್ಟಾಫ್ ಸೇರಿಕೊಂಡು ಇದನ್ನು ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ ? ಇದಕ್ಕೆ ಇನ್ನು ಕಾಲ ಬೇಕು ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಪ್ರಾಜೆಕ್ಟ್ ಇನ್‌ಕ್ಲೂಡ್ ಆಗಿದೆ. ಇದರ ಬಗ್ಗೆ ಇನ್ನೂ ಇನ್‌ವೆಸ್ಟಿಗೇಷನ್ ಆಗುತ್ತಾ ಇದೆ. ಆದಷ್ಟು ಬೇಗ ಇದನ್ನು ಕಂಪ್ಲೀಟ್ ಮಾಡಬೇಕೆಂದು ಹೇಳಿದ್ದೇನೆ ಮೊನ್ನೆ ನಡೆದಂಥಾ ಒಂದು ಇನ್‌ವೆಸ್ಟಿಗೇಷನ್ ಮಾಡಿದಂಥಾ ಸಂದರ್ಭದಲ್ಲಿ ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳು ಏನು ಮುಳುಗಡೆ ಆಗುತ್ತದೋ ಆ ಮುಳುಗಡೆಯ ಪ್ರದೇಶದ ಜನರು ಅಲ್ಲಿಗೆ ಬಂದು ಒಂದು ರೆಪ್ರೆಸೆಂಟೇಷನ್ ಕೊಟ್ಟಿ